



ಒಮ್ಮೆ ರಾಜನೊಬ್ಬ ತನ್ನ ಬಂದೀಖಾನೆಯಲ್ಲಿರುವ ಕೈದಿಗಳ ಅಪರಾಧಗಳ ವಿಚಾರಣೆ ಮಾಡಿ ಮುಗಿಸಿದ ಮೇಲೆ ಒಬ್ಬ ಕೈದಿಗೆ ಮರಣದಂಡನೆಯನ್ನು ವಿಧಿಸಿದನು. ರಾಜ ಅಲ್ಲಿಂದ ತೆರಳುತ್ತಲೇ ಆ ಕೈದಿಯು "ಇದು ಬಹಳ ಅನ್ಯಾಯ. ನಾನು ನಿರಪರಾಧಿ. ರಾಜ ಸರಿಯಾಗಿ ವಿಚಾರಣೆ ಮಾಡದೆ ನನಗೆ ಶಿಕ್ಷೆ ವಿಧಿಸಿದ್ದಾನೆ. ರಾಜನಿಗೆ ಸ್ವಲ್ಪವೂ ಬುದ್ಧಿಯಿಲ್ಲ" ಎಂದು ರಾಜನನ್ನು ದೂಷಿಸುತ್ತಿದ್ದ. ರಾಜನು ಆಸ್ಥಾನಕ್ಕೆ ಹಿಂದಿರುಗಿದ ನಂತರ, ಮಂತ್ರಿಯನ್ನು ಕುರಿತು, "ಏನು, ಮರಣದಂಡನೆ ವಿಧಿಸಲ್ಪಟ್ಟ ಕೈದಿ ನನ್ನನ್ನು ಬೈಯುತ್ತಿದ್ದನೇ?" ಎಂದು ಕೇಳಿದ. "ಆ ಕೈದಿ ಹೇಳುತ್ತಿದ್ದ, 'ಕ್ಷಮಿಸುವುದು ಬಹಳ ದೊಡ್ಡ ಗುಣ. ನಮ್ಮ ದೊರೆಯಲ್ಲಿ ದೊಡ್ಡ ಗುಣಗಳಿಗೆ ಏನೂ ಕೊರತೆಯಿಲ್ಲ'" ಎನ್ನುತ್ತ ಆ ಕೈದಿಗೆ ನ್ಯಾಯ ದೊರಕಿಸಿ ಅವನ ಜೀವವುಳಿಸಲು ಮಂತ್ರಿಯು ಒಂದು ಸಣ್ಣ ಸುಳ್ಳನ್ನೇ ಹೇಳಿದ. ಮಂತ್ರಿಯ ಮಾತನ್ನು ಕೇಳಿ ರಾಜನಿಗೆ ಬಹಳ ಸಂತೋಷವಾಯಿತು. ಅವನು ಮರಣದಂಡನೆ ವಿಧಿಸಿದ್ದ ಆ ಕೈದಿಯನ್ನು ಕ್ಷಮಿಸಿ ಬಂದೀಖಾನೆಯಿಂದ ಬಿಡುಗಡೆ ಮಾಡಿದನು.

ರಾಜನಿಗೆ ಸುಳ್ಳು ಹೇಳಿ ಕೈದಿಯನ್ನು ಬಿಡುಗಡೆ ಮಾಡಿದ್ದನ್ನು ನೋಡಿ, ಮಂತ್ರಿಯನ್ನು ಕಂಡು ಅಸೂಯೆ ಪಡುತ್ತಿದ್ದ ರಾಜನ ಉಪಮಂತ್ರಿಯು ಯೋಚಿಸಿದ: "ರಾಜನಿಗೆ ಮಂತ್ರಿಯು ಸುಳ್ಳನ್ನು ಹೇಳಿದ ವಿಷಯ ತಿಳಿಸಿದರೆ, ಮಂತ್ರಿಯನ್ನು ಶಿಕ್ಷಿಸಿ ನನ್ನನ್ನು ಪುರಸ್ಕರಿಸುತ್ತಾರೆ." ರಾಜನ ಬಳಿ ಬಂದು "ಆ ಕೈದಿ ತಮ್ಮನ್ನು ಕುರಿತು 'ಈ ರಾಜ ನಿಜವಾಗಲೂ ಕರುಣೆಯಿಲ್ಲದವನು ಹಾಗೆ, ಹೀಗೆ' ಎಂದು ಬೈಯುತ್ತಿದ್ದ. ಆದರೆ ಮಂತ್ರಿಯು ತಮಗೆ ಸುಳ್ಳು ಹೇಳಿ ಕೈದಿಯನ್ನು ಬಿಡುಗಡೆ ಮಾಡಿಸಿದ್ದಾನೆ" ಎಂದನು. ಉಪಮಂತ್ರಿಯ ಮಾತನ್ನು ಕೇಳಿ ರಾಜನು ಸ್ವಲ್ಪ ಹೊತ್ತು ಯೋಚಿಸಿದ ನಂತರ, 'ಮಂತ್ರಿ ಸುಳ್ಳು ಹೇಳಿದ್ದರೂ ತನಗಾಗಿ ಸುಳ್ಳು ಹೇಳಲಿಲ್ಲ. ಬೇರೊಬ್ಬನ ಜೀವವನ್ನು ಉಳಿಸಲು ಸುಳ್ಳು ಹೇಳಿರಬಹುದು. ಆದರೆ ನೀನು ಹೇಳುತ್ತಿರುವುದು ಸತ್ಯವಾದರೂ ಅದು ಮಂತ್ರಿಯ ಮೇಲಿನ ಅಸೂಯೆ, ದ್ವೇಷದಿಂದ ಪ್ರೇರಿತವಾಗಿದೆ. ದ್ವೇಷ, ಅಸೂಯೆಗಳಿಂದ ತುಂಬಿರುವ ನಿನ್ನಂತಹವನು ನನ್ನ ಆಸ್ಥಾನದಲ್ಲಿರಲು ಯೋಗ್ಯನಲ್ಲ" ಎಂದು ಹೇಳಿ ಅವನನ್ನು ಕೆಲಸದಿಂದ ತೆಗೆದುಹಾಕಿದನು. ✪

**ಸಂಗ್ರಹ : ವಿಜಯಕುಮಾರ್, ಮೈಸೂರು.**

